ಒ.ಎಸ್.ನಂ. 137/2023
PW-1

(ಇಂದು ದಿನಾಂಕಃ 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ವಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ SSA ವಕೀಲರಿಂದಃ**

ನಮ್ಮ ಕುಟುಂಬಕ್ಕೆ ಎಷ್ಟು ಆಸ್ತಿ ಇರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಹಿರಿಯರ ಮನೆ ಇರುತ್ತದೆ. ಗುಲ್ಬರ್ಗಾದಲ್ಲಿ ಒಂದು ಮನೆ ಇರುತ್ತದೆ ಎಂದರೆ ಸರಿಯಲ್ಲ. 2 ಸವಳಿನ ಫ್ಲಾಕ್ಟರಿಗಳು ಇವೆ ಎಂದರೆ ಸರಿ. ದಾವಾ ಆಸ್ತಿಗಳ ಸ.ನಂ. ಕ್ಷೇತ್ರ ಹೇಳಲು ಬರುವುದಿಲ್ಲ. ಅವುಗಳ ಚೆಕ್ಕುಬಂದಿ ಹೇಳಲು ಬರುವುದಿಲ್ಲ.

ದಾವೆಯನ್ನು ದಾಖಲಿಸಲು ನಾನು ಮಾಹಿತಿ ನೀಡಿರುತ್ತೇನೆ. ದಾವೆಯನ್ನು ದಾಖಲಿಸುವ ಕಾಲಕ್ಕೆ ದಾವಾ ಆಸ್ತಿಗಳ ವಿವರಣೆಯನ್ನು ನೀಡಿರುತ್ತೇನೆ. ಆದರೆ ನನಗೆ ಬಹಳ ದಿನ ಆಗಿದ್ದರಿಂದ ನೆನಪಿರುವುದಿಲ್ಲ. ಸ.ನಂ. 63/4 ಕ್ಷೇತ್ರ 5 ಎಕರೆ 20 ಗುಂಟೆ ನನ್ನ ಗಂಡ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಮನೆಯ ಹಿರಿತನವನ್ನು ನನ್ನ ಗಂಡ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಕ್ಕಳು ನೋಡಿಕೊಳ್ಳುತ್ತೇವೆ. ನಾನು ನನ್ನ ಗಂಡ ಮತ್ತು ಮಕ್ಕಳು ಒಂದೇ ಮನೆಯಲ್ಲಿ ಇರುತ್ತೇವೆ ಎಂದರೆ ನನ್ನ ಗಂಡ ಗುಲ್ಬರ್ಗಾದಲ್ಲಿ ಇರುತ್ತಾರೆ ನಾನು ಮತ್ತು ನನ್ನ ಮಕ್ಕಳು ಕೊರವಿಯಲ್ಲಿ ಇರುತ್ತೇವೆ. ನನ್ನ ಗಂಡ ಗುಲ್ಬರ್ಗಾದಲ್ಲಿ ಬಾಡಿಗೆ ಮನೆಯಲ್ಲಿ ಇರುತ್ತಾರೆ. ಆ ಮನೆಯ ಮಾಲೀಕರ ಹೆಸರು ಅದರ ನಂಬರ ಹೇಳಲು ಬರುವುದಿಲ್ಲ. ಅದರ ಬಾಡಿಗೆ ರಸೀದಿಯನ್ನು ಹಾಜರು ಪಡಿಸಿಲ್ಲ. ನನ್ನ ಗಂಡನ ಎಲ್ಲಾ ಗುರುತಿನ ಚೀಟಿಗಳು ಕೊರವಿ ಗ್ರಾಮಕ್ಕೆ ಸಂಬಂಧಿಸಿರುತ್ತವೆ ಎಂದರೆ ಸರಿ.

ಇವತ್ತು ನಾನು ಮತ್ತು ನನ್ನ ಗಂಡ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿ. ಅವರು ಮತ್ತು ನಾನು ಬೇರೆ ಬೇರೆ ಯಾಗಿ ಬಂದಿರುತ್ತೇವೆ. ಸ.ನಂ. 58 ಫಲವತ್ತಾದ ಭೂಮಿ ಅಲ್ಲ ಎಂದರೆ ಸರಿಯಲ್ಲ. ಅದರ ಆದಾಯ ತೋರಿಸಲು ನಾನು ದಾಖಲಾತಿ ಸಲ್ಲಿಸಿಲ್ಲ. ನನಗೆ ನನ್ನ ಗಂಡನಿಗೆ ಯಾವುದೇ ಸರ್ಕಾರಿ ನೌಕರಿ ಆದಾಯ ಇರುವುದಿಲ್ಲ ಎಂದರೆ ಸರಿ.

ಸ.ನಂ. 63/4 ಕ್ಷೇತ್ರ 5 ಎಕರೆ 20 ಗುಂಟೆ ಅವರ ಹೆಸರಿನಲ್ಲಿ ಪಹಣಿ ಪತ್ರಿಕೆ ಇತ್ತು ಎಂದರೆ ಸರಿ. ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ನಮ್ಮ ಕುಟುಂಬದ ಅವಶ್ಯಕತೆಗಳಿಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬವು ಎಲ್ಲಾ ಅನುಕೂಲತೆಗಳನ್ನು ಹೊಂದಿದೆ. ನಮ್ಮ ಕುಟುಂಬ ಎಲ್ಲಾ ಅನುಕೂಲತೆಗಳನ್ನು ಹೊಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 63/4 ಕ್ಷೇತ್ರ 5 ಎಕರೆ 20 ಗುಂಟೆ ಈಗ 2ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಅದನ್ನು ಉಳುಮೆ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ನಾವು ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣ ದಾಖಲಿಸುವುದಕ್ಕಿಂತ ಮುಂಚೆ ದಾವಾ ಆಸ್ತಿಗಳ ದಾಖಲಾತಿಯನ್ನು ನೋಡಿರುತ್ತೇನೆ. ಅವು ಹೆಣ್ಣು ಮಕ್ಕಳ ಹೆಸರಿನಲ್ಲಿರುತ್ತವೆ. ದಾವಾ ಆಸ್ತಿಗಳು ಪ್ರತಿವಾದಿಯರ ಹೆಸರಿನಲ್ಲಿ ಇರುವುದನ್ನು ರದ್ದು ಮಾಡಲು ಕಂದಾಯ ಪ್ರಾಧಿಕಾರದಲ್ಲಿ ಪ್ರಕರಣ ದಾಖಲಿಸಿಲ್ಲ. ಅವುಗಳನ್ನು ಪ್ರಶ್ನಿಸಿಲ್ಲ. ದಾವಾ ಆಸ್ತಿಯಲ್ಲಿ ದಾವೆಯನ್ನು ದಾಖಲಿಸುವುದಕ್ಕಿಂತ ಮುಂಚೆ ಪ್ರತಿವಾದಿಯರಿಗೆ ಪಾಲು ವಿಭಾಗ ನೀಡಬೇಕೆಂದು ಕೇಳಿಕೊಂಡಿಲ್ಲ ಎಂದರೆ ಸರಿ. 2ನೇ ಪ್ರತಿವಾದಿ ಕ್ರಯ ಪಡೆದ ವಿಷಯ ನನಗೆ ಗೊತ್ತಿಲ್ಲ. ದಾವೆಯನ್ನು ದಾಖಲಿಸುವುದಕ್ಕಿಂತ ಮುಂಚೆ 2ನೇ ಪ್ರತಿವಾದಿಯನ್ನು ನಾನು ಭೇಟಿಯಾಗಿರುವುದಿಲ್ಲ. ನಾನು ನನ್ನ ಗಂಡ ಸೇರಿ 2ನೇ ಪ್ರತಿವಾದಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಂಗತಿಗಳನ್ನು ನಮೂದಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.